"ಓ... ಸಾಕು ಸಾಕು..." ರೈನಾ ಮಕ್ಕಳಿಗೆ ಕೂಗಿದಳು. "ಯಾರ ಬಗ್ಗೆಯೂ ಆ ರೀತಿ ಮಾತಾಡಬಾರದು. ಅದರಲ್ಲೂ ಈಗಲೂ ಇರೋ ಒಂದು ದೇಶದ ಬಗ್ಗೆ" ಅಲಿಗೆ ಕುಳಿತುಕೊಳ್ಳಲು ಹೇಳಿ ಅವಳು ಎಲ್ಲರಿಗೂ ಪುಸ್ತಕಗಳನ್ನು ಹೊರತೆಗೆಯಲು ಹೇಳಿದಳು.

ಮುಂದಿನ ಫ್ರೀ ಪೀರಿಯಡ್ ಒಂದರಲ್ಲಿ ರೈನಾ ಹೇಳಿ ಕಳುಹಿಸಿದ ಅಟೆಂಡರನ ಜೊತೆ ಅಲಿ ಸ್ಟಾಫ್ ರೂಮಿಗೆ ಬಂದ. ತನ್ನ ಮುಂದೆ ಎಂದಿನಂತೆ ತಲೆತಗ್ಗಿಸಿ ನಿಂತಿದ್ದ ಅಲಿಯನ್ನು ರೈನಾ ಸ್ವಲ್ಪ ಹೊತ್ತು ಕರುಣೆಯಿಂದ ನೋಡಿದಳು. "ಅಲೀ" ಅವಳು ಕರೆದಳು. "ನಾನು ಇದನ್ನು ಹೇಳ್ತಾ ಇರೋದು ನಿನ್ನ ಟೀಚರಾಗಿ ಅಲ್ಲ. ಇವತ್ತು ಕ್ಲಾಸಿನಲ್ಲಿ ನೀನು ಅಲ್ಲೇ ನಿಲ್ಲೋದರ ಬದಲು ಎದ್ದು ಬಂದು ಅಹಮದ್ ಮತ್ತು ಅಶ್ವಿನ್‌ನ ಕೆನ್ನೆಗೆ ಎರಡು ಬಾರಿಸುವೆ ಎಂದು ನಾನು ಪ್ರಾಮಾಣಿಕವಾಗಿ ಆಸೆಪಟ್ಟೆ. ಅದಕ್ಕೆ ಸಂಬಂಧಿಸಿದಂತೆ ಯಾವ ಸಮಸ್ಯೆ ಬಂದರೂ ನಾನು ನಿನ್ನ ಪರವಾಗಿ ನಿಲ್ತಾ ಇದ್ದೆ. ನಿನ್ನ ಸ್ವಂತ ದೇಶದ ಬಗ್ಗೆ ಕೆಟ್ಟದಾಗಿ ಮಾತನಾಡುವುದನ್ನು ಕೇಳಿಸಿಕೊಂಡು ಅದು ಹೇಗೆ ಸುಮ್ಮನೆ ಇದ್ದೆ?" ನಿಧಾನವಾಗಿ, ತುಂಬಾ ನಿಧಾನವಾಗಿ ಅಲಿ ಕಣ್ಣುಗಳನ್ನು ಎತ್ತಿದ. "ಮಿಸ್, ನಾವು ಅಫ್ಘಾನಿಗಳು ಯಾರಿಗೆ ಏನನ್ನೂ ಮನದಟ್ಟು ಮಾಡ್ಬೇಕಾಗಿಲ್ಲ" ರೈನಾ ಅವನ ಹರವಾಗಿ ಅರಳಿದ ಕಣ್ಣುಗಳ ಸೌಮ್ಯ, ಗಂಭೀರವಾದ

